ಕಾವ್ಯ ಕಾರಣ

# ನಾವು ಸೃಷ್ಟಿಸುವುದು ಮಾತ್ರವಲ್ಲ, ಕಾವ್ಯ ನಮ್ಮನ್ನೂ ಸೃಷ್ಟಿಸುತ್ತದೆ

2022ರ ಅಕ್ಟೋಬರ್ 21ರಿಂದ 24ರವರೆಗೆ ಬಳ್ಳಾರಿಯಲ್ಲಿ ವಿಶ್ವ ಕವಿ ಸಮ್ಮೇಳನ 'ಸಂಗಂ' ಆಯೋಜನೆಗೊಂಡಿತ್ತು. ಕಾವ್ಯೋತ್ಸವದಲ್ಲಿ ಭಾಗಿಯಾಗಿ, ಆಶಯ ನುಡಿಗಳನ್ನಾಡಿದ ಅರ್ಜೆಂಟೀನಾದ ಅನುಭಾವಿ ಕವಿ **ಯೊಹೊ ಮೂಹಿಕಾ** ಅವರ ಮಾತುಗಳು ಇಲ್ಲಿವೆ. ಕಾವ್ಯದ ವಿದ್ಯಾರ್ಥಿಗಳಿಗೆ ಪ್ರಿಯವಾಗಬಲ್ಲ ಈ ಪುಟ್ಟ ಟಿಪ್ಪಣಿ, ಕಾವ್ಯ ಮತ್ತು ಬದುಕಿಗೂ ಇರುವ ಅವಿನಾಭಾವ ಸಂಬಂಧದ ಕುರಿತು ಹೇಳುತ್ತಾ ಕಾವ್ಯವೇ ಆಗಿಬಿಟ್ಟಿದೆ.

ಕನ್ನಡಕ್ಕೆ: **ಅಶ್ವಿನಿ ಅರವಿಂದ**

ಧನ್ಯವಾದಗಳು ಈ ಅವಕಾಶಕ್ಕೆ, ಈ ಸಂದರ್ಭಕ್ಕೆ ಇದೇ ನಾನು ಹೇಳುವ ಮೊದಲ ಪದ. ಕೇವಲ ಈ ಸಂದರ್ಭಕ್ಕೆ ಮಾತ್ರವಲ್ಲ, ಜೀವನದ ಪ್ರತಿಯೊಂದು ಸಂದರ್ಭವೂ ನಮಗೆ ಉಡುಗೊರೆಯೇ ಎಂಬ ಅರಿವಿರಬೇಕು. ಈ ಜೀವನವೇ ನಮಗೆ ದೊರೆತಿರುವ ಮೊದಲ ಉಡುಗೊರೆ. ಜೀವನವೇ ನಮ್ಮನ್ನು ಮತ್ತೆ ಮತ್ತೆ ಸೃಜಿಸುತ್ತದೆ, ಹೇಗೆ ಸೃಷ್ಟಿಸಬೇಕೆಂಬುದನ್ನು ನಾವು ಕಲಿತದ್ದೂ ಅದರಿಂದಲೇ.

ಜೀವನವನ್ನು ಸಂಭ್ರಮಿಸುವ, ಹಾಡುವ ಈ ಕಾರ್ಯಕ್ರಮವನ್ನು ಆಗು ಮಾಡಿಸಿದ ಎಲ್ಲರಿಗೂ ನನ್ನ ಧನ್ಯವಾದಗಳು. ನನ್ನ ಪದಗಳ ತಾತ್ಪರ್ಯವನ್ನು, ಅದರಾಳವನ್ನು ತಿಳಿಸಲು ಒಂದು ಪುರಾಣದ ಸಂದರ್ಭವನ್ನು ಇಲ್ಲಿ ಹಂಚಿಕೊಳ್ಳುತ್ತೇನೆ. ಪ್ರಾಚೀನ ಗ್ರೀಸ್‌ನಲ್ಲಿ 2500 ವರ್ಷಗಳ ಹಿಂದೆ ಇದ್ದ ದಾರ್ಶನಿಕ ಹೆಸಿಯೋಡ್ ಹೇಳಿದ ಸೃಷ್ಟಿಯ ಕಥೆಯನ್ನು ಇಲ್ಲಿ ಉಲ್ಲೇಖಿಸುತ್ತೇನೆ.

ಸೃಷ್ಟಿಕರ್ತ ಜಿಯಸ್ ಜಗತ್ತನ್ನು ಸೃಷ್ಟಿಸಿದ ನಂತರ ತಾನೇ ಸೃಷ್ಟಿಸಿದ ತನ್ನದೇ ಜಗತ್ತನ್ನು ಸಂತೋಷ ಮತ್ತು ಪ್ರೀತಿಯಿಂದ ನೋಡಿದನು. ನಾವು ಕವಿತೆಯನ್ನು ಬರೆದು ಮುಗಿಸಿದಾಗ ನಮಗೆ ಹೇಗೆ ಅನಿಸುತ್ತದೋ ಆತನಿಗೂ ಹಾಗೆಯೇ ಆಯಿತು. ತನ್ನ ಸೃಷ್ಟಿಯನ್ನು ಇತರರಿಗೆ ಹಂಚಿಕೊಳ್ಳುವವರೆಗೆ ಅದು ಪೂರ್ಣತೆಯನ್ನು ಪಡೆಯುವುದಿಲ್ಲವೆಂದು ಭಾವಿಸಿ ತನ್ನ ನೆರೆಯ ದೇವರುಗಳನ್ನು ಕರೆದು ಹೆಮ್ಮೆಯಿಂದ ತನ್ನ ಸೃಷ್ಟಿಯನ್ನು ತೋರಿಸಿದನು. ಅವರೆಲ್ಲರೂ ಆತನ ಸೃಷ್ಟಿಯನ್ನು ಆಮೂಲಾಗ್ರ ನೋಡಿ ತಮ್ಮ ನಡುವೆ ಚರ್ಚೆ ನಡೆಸಿ ಒಂದು ಆಕ್ಷೇಪವೆತ್ತಿದರು. ಅದೇನೆಂದರೆ, 'ನಿನ್ನ ಸೃಷ್ಟಿ ಬಹಳ ಚೆನ್ನಾಗಿದೆ. ಆದರೆ